ಶ್ರೀ ಬಿ.ಎಂ. ಇದಿನಬ್ಬ (ವಿಧಾನಸಭೆಯ ಹಕ್ಕುಭಾಧ್ಯತಾ ಸಮಿತಿಯಅಧ್ಯಕ್ಷರ ಪರವಾಗಿ) ಮಾನ್ಯ ಸಭಾಧ್ಯಕ್ಷರೇ, ಹಕ್ಕುಭಾಧ್ಯತಾ ಸಮಿತಿಯ ಒಂದನೇಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಗಮನಸೆಳೆಯುವ ಸೂಚನೆ

ವೀರಪ್ಪನ್ ಮತ್ತು ಆತನ ಸಹಚರರಿಂದ ಸಾರ್ವಜನಿಕರಿಗೆ ಭಯದ ಬೆದರಿಕೆ.

ಶ್ರೀ ಜಿ. ರಾಜುಗೌಡ : ಮಾನ್ಯ ಸಭಾಧ್ಯಕ್ಷರೇ, ಕುಖ್ಯಾತ ವೀರಪ್ಪನ್ ಮತ್ತು ಆತನ ತಂಡದವರು ಒಂದು ವಾರದಿಂದೀಚೆಗೆ ದಾರಿಹೋಕರಿಗೆ ಕೊಡುತ್ತಿರುವ ಕಿರುಕುಳ, ತೊಂದರೆ, ಹಣಕ್ಕಾಗಿ ಬಂಧನ ಇತ್ಯಾದಿ ಅಕ್ರಮ ಚಟುವಟಿಕೆಗಳಿಂದ ಆ ಭಾಗದಲ್ಲಿರುವ ಜನರು ಭಯಭೀತರಾಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ತಮ್ಮ ಅನುಮತಿ ಪಡೆದು ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

ದಿನಾಂಕ 18-02-92ರಂದು ಹನೂರು ಗ್ರಾಮದ ಪ್ರಧಾನರಾದ ಶ್ರೀ ಸಂಪಂಗಿ ರಾಮಯ್ಯ ಎಂಬುವರು, ರಾಂಪುರ ಪೋಲೀಸ್ ಠಾಣೆಗೆ ಹಾಜರಾಗಿ ದೂರು ಒಂದನ್ನು ಕೊಟ್ಟಿದ್ದಾರೆ. ವಿವರ ಹೀಗಿದೆ.

ದಿನಾಂಕ 16-02-92 ರಂದು ಮಧ್ಯಾಹ್ನ 3 ಘಂಟೆಯಲ್ಲಿ ಫಿರ್ಯಾದಿದಾರರ ಮಗ ರಾಮಮೂರ್ತಿ ಮತ್ತು ಇತರ 3 ಜನರು ಮಾರುತಿ ಜಿಪ್ಸಿ ವಾಹನದಲ್ಲಿ ಬರುತ್ತಿರುವಾಗ ಚೆಂಗಡಿ ರಸ್ತೆಯ ಹತ್ತಿರದ ಅರಣ್ಯದಲ್ಲಿ ವೀರಪ್ಪನ್ ಗುಂಪಿನ 15 ಜನರು ಇವರನ್ನು ಹೆದರಿಸಿ ಅಪಹರಿಸಿರುತ್ತಾರೆ. ಕೆಲ ಸಮಯದನಂತರ ಇವರಲ್ಲಿ ಒಬ್ಬರನ್ನು ವಾಪಸ್ಸು ಕಳುಹಿಸಿಕ್ವಾರಿಯ ಮ್ಯಾನೇಜರ್ ಗುಣಶೇಖರನವರನ್ನು ಕರೆತರುವಂತೆ ಹೇಳಿದರು. ಗುಣಶೇಖರ ಎಂಬುವವರು ಗುಂಪಿಗೆ ಬಂದನಂತರ, ರಾಮಮೂರ್ತಿಗೆ ಅವರತಂದೆಗೆ ರೂ. 2-00 ಕೋಟಿ ಮುಂಚಿತವಾಗಿ ತಿಳಿಸಿರುವ ಜಾಗಕ್ಕೆತಂದುಕೊಟ್ಟು ರಾಮಮೂರ್ತಿಯನ್ನು ಬಿಡಿಸಿಕೊಂಡು ಹೋಗುವಂತೆಪತ್ರ ಬರೆಯಬೇಕೆಂದು ಬೆದರಿಸಿ ಬರೆಸಿರುತ್ತಾರೆ. ಅಪಹರಿಸಿದ ಗುಂಪು ದಿನಾಂಕ 17-02-92 ರಂದು ಒಬ್ಬರನ್ನು ಬಿಡುಗಡೆಗೊಳಿಸಿರುತ್ತಾರೆ. ಅದರಂತೆ ದಿನಾಂಕ 21-02-92ರಂದು ಸಂಪಂಗಿರಾಮಯ್ಯನವರ ಮಗ ರಾಮಮೂರ್ತಿಯನ್ನೂ ಸಹ ಬಿಡುಗಡೆಗೊಳಿಸಿರುತ್ತಾರೆ. ಸದರಿ ವಿಷಯದಲ್ಲಿ ಸದಪಂಗಿರಾಮಯ್ಯನವರು, ಅಪಹರಣಕಾರರ ಗುಂಪಿಗೆ ಹಣ ಏನಾದರೂ ಕೊಟ್ಟಿರುವರೇ ಎಂಬ ಬಗ್ಗೆ ಯಾವುದೇ ಮಾಹಿತಿ ಗೊತ್ತಾಗಿರುವುದಿಲ್ಲಮತ್ತು ಅವರೂ ಸಹ ತಿಳಿಸಲು ನಿರಾಕರಿಸಿದ್ದಾರೆ. ಈ ವಿಷಯದಲ್ಲಿ ರಾಂಪುರ ಪೋಲೀಸ್ ಠಾಣೆ ಅಪರಾದ ನಂ.14.92ಕಲಂ 363 ಭಾರತೀಯ ದಂಡ ಸಂಹಿತೆ ಜೊತೆಗೆ 3 ಮತ್ತು 25 ಭಾರತ ಶಸ್ತ್ರಾಸ್ತ್ರ ಕಾಯ್ದೆಯಡಿಯಲ್ಲಿ ಪ್ರಕರಣ ಒಂದನ್ನು ನೊಂದಾಯಿಸಿಕೊಂಡು ತನಿಖೆ ಮಾಡಲಾಗುತ್ತಿದೆ. ವೀರಪ್ಪನ್ ಗ್ಯಾಂಗ್‌ನವರಿಂದ ಹಣಕ್ಕಾಗಿ ಅಪಹರಣ ಮಾಡಿದ ಪ್ರಕರಣ ಇದೇ ಮೊದಲನೆಯದಾಗಿರುತ್ತದೆ. ಕಲ್ಲುಗಣಿ ಗುತ್ತಿಗೆ ದಾರರನ್ನು ಅರಣ್ಯದಲ್ಲಿ ಹೆದರಿಸಲಾಗಿದೆಯೆಂದೂ ವರದಿಗಳಿವೆ.

ವೀರಪ್ಪನ್ ಮತ್ತು ಈತನ ಗುಂಪಿನವರನ್ನು ಹಿಡಿಯಲು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಒಬ್ಬರ ನೇತೃತ್ವದಲ್ಲಿ ನೇಮಕವಾಗಿರುವ ಟಾಸ್ಕ್‌ಫೋರ್ಸ್‌ನ ವಿಶೇಷ ಕಾರ್ಯದಳವು ಇವರನ್ನು ಹಿಡಿಯಲು ಶ್ರದ್ಧೆಯಿಂದ, ಪ್ರಾಮಾಣಿಕವಾಗಿ ಶ್ರಮಪಡುತ್ತಿದ್ದಾರೆ. ಈ ಪ್ರಕರಣವೂ ಸಹ ಈ ವಿಶೇಷ ದಳದ ಗಮನಕ್ಕೂ ಸಹ ಬಂದಿದೆ.

+ ಶ್ರೀ ಜಿ. ರಾಜುಗೌಡ : ಸನ್ಮಾನ್ಯ ಅಧ್ಯಕ್ಷರೆ, ಕಳೆದ 3-4 ವರ್ಷದಿಂದ ಪೋಲೀಸ್ ಮತ್ತು ಟಾಸ್ಕ ಫೋರ್ಸ್‌ನ ಕಾರ್ಯಾಚರಣೆಯು ಸಂಪೂರ್ಣವಾಗಿ ವಿಫಲವಾಗಿದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ,ಗೋಪಿನಾಥಂನಲ್ಲಿ ಈ ಪೋಲೀಸ್ ದಳ ಪೋಲೀಸ್‌ನ ಒಂದು ಶಿಬಿರವಿದೆ ಅದರ ಪಕ್ಕದಲ್ಲಿಯೇ ಕೋಟೆನಾಯಕ ಎಂಬುವನ ಕೊಲೆಯಾಗಿದೆ.ಇವನ ಕೊಲೆಯಾಗಿರತಕ್ಕ ಜಾಗಕ್ಕೂ ಪೋಲೀಸ್‌ನವರು ಇರತಕ್ಕ ಜಾಗಕ್ಕೂ ಕೇವಲ 10 ಗಜ ದೂರವಿದೆ. ಆಗ ಅವನನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಮೊನ್ನೆ ಕಿರೇಪಾಳ್ಯದ ಮಾದಯ್ಯ ಎಂಬ ಕರಿಕಲ್ಲು ಮಾಲೀಕರು ಮುಖ್ಯ ರಸ್ತೆಯಲ್ಲಿ ಬರುತ್ತಿದ್ದಾಗ ಅವರ ಜೀಪನ್ನು ಅಡ್ಡಗಟ್ಟಿ ಅವರನ್ನು ಜೀಪಿನಿಂದ ಹೊರಗೆಳೆದು ಅವರನ್ನು ಬಂದಿಸಿ ಅವರ ಕಡೆಯವರಿಂದ 50 ಸಾವಿರ ರೂಪಾಯಿಗಳನ್ನು ಪಡೆದಾದ ನಂತರ ಬಿಟ್ಟಿದ್ದಾರೆ. ನೀವು ಇರತಕ್ಕ ಸ್ಥಳಕ್ಕೂ ಕಿರೇಪಾಳ್ಯ ಇರತಕ್ಕ ಸ್ಥಳಕ್ಕೂ ಕೇವಲ ಮೂರು ಕಿ.ಮಿ. ದೂರವಿದೆ. ಅದೂ ಕೂಡ ಹೆದ್ದಾರಿಯಲ್ಲಿ ಆಗಿರತಕ್ಕದ್ದು, ಮೂರನೆಯದಾಗಿ ಇನ್ನೊಬ್ಬ ತಮಿಳು ನಾಡಿನ ಕರಿಕಲ್ಲು ಮಾಲೀಕರ ಮೆನೇಜರ್‌ರವರನ್ನು ಬಂಧಿಸಿ ಅವರಿಂದ ಮೂರುಲಕ್ಷ ರೂಪಾಯಿಗಳನ್ನು ಪಡೆದು ಆತನನ್ನು ಬಿಡುಗಡೆ ಮಾಡಿದ್ದಾರೆ. ನಾಲ್ಕನೆಯದು ಕಳೆದ ವಾರ ಸಂಪಂಗಿ ರಾಮಯ್ಯನವರಿಗೆ ಮಾಡಿದ್ದಾರೆ. ಸಂಪಂಗಿರಾಮಯ್ಯನವರು ಪೋಲೀಸ್‌ಗೆ ಕೇನ್ ಕೊಟ್ಟಿರತಕ್ಕದ್ದು ನಿಜ. ಕೇವಲ ಎಲ್ಲೆಲ್ಲಿ ಪೋಲೀಸ್ ಶಿಬಿರಗಳಿವೆಯೋ ಅಲ್ಲಲ್ಲಿ ಇಂತಹ ಕೆಲಸವಾದಾಗ ಅಲ್ಲಿರತಕ್ಕ ಜನರು ಇದರಿಂದ ಭಯಭೀತರಾಗಿದ್ದಾರೆ. ಇವರ ಕಾರ್ಯಾಚರಣೆಯು ಪೂರ್ಣವಾಗಿ ವಿಫಲವಾಗಿದೆ,

ಸಂಪೂರ್ಣವಾಗಿ ವಿಫಲವಾಗಿದೆ. ಧೃಯಮಾಡಿ ಇವರ ಕಾರ್ಯಾಚರಣೆಯ ಬಗ್ಗೆ ಗಮನಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಮತ್ತು ಏಕೆ ಇವನನ್ನು ಹಿಡಿಯಲು ಆಗಲಿಲ್ಲವೆನ್ನುವುದಕ್ಕೆ ನಾನು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಅದು ದಟ್ಟವಾದ ಅರಣ್ಯ ಸುಮಾರು 700 ಚದರ ಕಿ.ಮಿ.ಇದೆ ಯಾರು ಆತನಿಗೆ ಆಹಾರವನ್ನು ಸರಬರಾಜು ಮಾಡುತ್ತಾರೆ ಎಂಬ ಬಗ್ಗೆ ಪೋಲೀಸ್‌ನವರು ನಿಗಾ ವಹಿಸಬೇಕು. ಗಡಿಭಾಗದಲ್ಲಿರತಕ್ಕ ಅಂಗಡಿಯಿಂದ ಅವನಿಗೆ ಆಹಾರ ಸಾಮಗ್ರಿಗಳು ಹೋಗುತ್ತವೆ. ಎರಡನೆದಾಗಿ ದನಕಾಯತಕ್ಕ ಜನರ್‍ಯಾರು ಕಾಡಿನೊಳಕ್ಕೆ ಹೋಗುತ್ತಾರೆ. ಅವರಿಂದ ಎಲ್ಲಾ ವಿಷಯಗಳು ಗೊತ್ತಾಗುತ್ತದೆ. ಮೂರನೆಯದಾಗಿ ಕರಿಕಲ್ಲು ಮಾರತಕ್ಕ ಎಲ್ಲರಿಗೂ ಕೂಡ ತಾತ್ಕಲಿಕವಾಗಿ ಪರವಾನಿಗೆಯನ್ನು ನಿಲ್ಲಿಸಬೇಕೆಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತೇನೆ. ಏಕೆಂದರೆ ಕರಿಕಲ್ಲುಗಳಲ್ಲಿ ಕೆಲಸ ಮಾಡುತ್ತಿರತಕ್ಕವರು ಎಲ್ಲಾ ತಮಿಳಿನವರೆ, ಆ ತಮಿಳಿನವರು ಅವನಿಗೆ ಮಾಹಿತಿಯನ್ನು ಕೊಡುತ್ತಾರೆ. ಮತ್ತು ಕರಿಕಲ್ಲಿನಲ್ಲು ಲೋಡರ್ಸ್ ಆಗಿರತಕ್ಕವರು ಕೂಡ ತಮಿಳಿನವರು. ಅವರು ಅವನಿಗೆ ಮಾಹಿತಿಯನ್ನು ಕೊಡುತ್ತಾರೆ. ಮತ್ತೆ ಈ ಕರಿಕಲ್ಲು ಮಾಲೀಕರು ಅವನಿಗೆ ವಂತಿಗೆಯನ್ನು ಕೊಡತಕ್ಕ ಮಾಹಿತಿ ಕೂಡ ತಿಳಿದುಬಂದಿದೆ. ನಾವು ಅವರನ್ನು

ಹಿಡಿಯಬೇಕಾದರೆ ಹೊರಗಿನಿಂದ ಬಹಿರಂಗವಾಗಿ ಯಾವುದೇ ರೀತಿಯ ಮಾಹಿತಿಯು ಹೋಗದಂತೆ ಮಾಡಬೇಕು. ಕರಿಕಲ್ಲು ಗಣಿಯ ಕೆಲಸವನ್ನು ತಾತ್ಕಲಿಕವಾಗಿ ನಿಷೇಧ ಮಾಡಬೇಕು. ಮೂರನೆಯದಾಗಿ ಮೈಸೂರಿನ ಜಿಲ್ಲಾಧಿಕಾರಿಗಳು ಈ ಅರಣ್ಯ ಪ್ರದೇಶನ್ನು ನಿಷೇಧ ಪ್ರದೇಶವೆಂದು ಘೋಷಿಸಿದರೂ ಸಹ ಪ್ರತಿಯೊಂದಕ್ಕೂ ಕಾಡಿಗೆ ಹೋಗುತ್ತಿದ್ದಾರೆ. ಬೇರೆಯವರು ಕಾಡಿಗೆ ಹೋಗುವುದರಿಂದ ಅವನಿಗೆ ಎಲ್ಲಾ ಮಾಹಿತಿಗಳು ಗೊತ್ತಾಗಿ ಅವನು ಅವಿತುಕೊಳ್ಳಲು ಅನುಕೂಲವಾಗುತ್ತದೆ. ಆದುಧರಿಂದ ನಾನು ಹೇಳುವುದೇನೆಂದರೆ, ಕಾಡಿಗೆ ಯಾರಿಗೂ ಕೂಡ ಪ್ರವೇಶ ಮಾಡದಂಥ ರೀತಿಯಲ್ಲಿ ಸರ್ಕಾರ ಕಟ್ಟಪ್ಪಣೆ ಮಾಡಬೇಕು. ದನಗಳನ್ನು ಮೇಯಿಸಲು ಬೇರೆ ವ್ಯವಸ್ಥೆಯನ್ನು ಮಾಡಬೇಕು. ದನಕಾಯತಕ್ಕ ಸಣ್ಣಸಣ್ಣ ಮಕ್ಕಳು ಅತನಿಗೆ ಎಲ್ಲಾ ಮಾಹಿತಿಯನ್ನು ಕೊಡುತ್ತಾರೆ. ಅವನು ಅವರಿಗೆ 100-200 ರೂ. ಕೊಟ್ಟು ಅವರ ಮುಖಾಂತರ ಆಹಾರ ಸಾಮಗ್ರಿಗಳನ್ನು ತರಿಸಿಕೊಳ್ಳತಕ್ಕದ್ದು, ಅವರಿಂದ ಮಾಹಿತಿಯನ್ನು ತೆಗೆದುಕೊಳ್ಳತಕ್ಕ ಕೆಲಸವನ್ನು ಮಾಡುತ್ತಿದ್ದಾನೆ , ಬಹುಶಃ ತಾವು ತೀವ್ರವಾಗಿ ಇದರ ಬಗ್ಗೆ ಗಮನಹರಿಸದಿದ್ದರೆ ನಾನು ಕ್ಷೇತ್ರದಲ್ಲಿ ಪ್ರವಾಸಮಾಡುವುದು ಕಷ್ಟವಾಗುತ್ತದೆ. ನಮಗೂ ಅಪಾಯ ಸಂಭವಿಸಬಹುದು. ನನಗೂ ರಕ್ಷಣೆಯನ್ನು ಒದಗಿಸಬೇಕು.

ಅವನು ಬೆಟ್ಟದ ಮೇಲೆ ಅಡಗಿರುತ್ತಾನೆ. ದನ ಕಾಯುವವರಿಗೆ ಅವನ ಪರಿಚಯವಿದೆ. ಆ ಕಾಡು ಪ್ರದೇಶದಲ್ಲಿ ಎತ್ತರವಾದ ಬೆಟ್ಟವಿದೆ. ಅಲ್ಲಿ ಒಂದು ಪೋಲೀಸ್ ತುಕಡಿಯನ್ನು ಹಾಕಬೇಕು. ಇಲ್ಲದಿದ್ದರೆ ಅವನನ್ನು ಪತ್ತೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಕನಿಷ್ಟ ಪಕ್ಷ 1000 ಜನ ಸೈನಿಕರನ್ನು ತಾವು ಕರೆಯಿಸಿ ಇಡೀ ಕಾಡಿನಲ್ಲಿ ಜಾಲಾಡಿಸಿ ಎಲ್ಲಿ ಅವನು ಅಡಗಿಕೊಂಡಿದ್ದಾನೆ ಎನ್ನುವುದನ್ನು ಪತ್ತೆ ಮಾಡತಕ್ಕಂಥ ಕೆಲಸವನ್ನು ತಾವು ಮಾಡಿದರೆ ಅನುಕೂಲವಾಗಬಹುದೆಂದು ನನಗನ್ನಿಸುತ್ತದೆ. ತಾವು ಎಷ್ಟೇ ಕಷ್ಟಪಟ್ಟರೂ ಎಷ್ಟೇ ವೆಚ್ಚಮಾಡಿದರೂ ಅವನನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಒಂದು ಹೊಸ ತಂತ್ರವನ್ನು ತಾವು ರೂಪಿಸಬೇಕು. ಹೆಚ್ಚಿನ ಜನ ಸೈನಿಕರನ್ನು ಕಳುಹಿಸಬೇಕು. ಅರಣ್ಯ ಪ್ರದೇಶದಲ್ಲಿ ಯಾರು ಇದ್ದಾರೆ ಆ ಜನಗಳನ್ನೆಲ್ಲಾ ಒಟ್ಟುಗೂಡಿಸಿ ಅವರ ಮುಖಾಂತರ ಪೋಲೀಸರ ಸಹಾಯವನ್ನು ಕೊಟ್ಟು ನಾವೆಲ್ಲರೂ ಕಾಡನ್ನು ಜಾಲಾಡಿದಾಗ ಬಹುಶಃ ಅವನ ಹುಟ್ಟನ್ನು ಅಡಗಿಸಬಹುದು ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ವೇಳೆ ಕಾಲ ವಿಳಂಬವಾದರೆ ಇನ್ನು ಅನೇಕ ಜನ ಅವನ ಗುಂಪಿಗೆ ತುತ್ತಾಗಬಹುದೆಂದು ಅನ್ನಿಸುತ್ತಿದೆ. ದಯವಿಟ್ಟು ಆ ಪ್ರದೇಶದಲ್ಲಿ ಇರುವಂತಹ ಜನಗಳನ್ನು ಒಟ್ಟುಗೂಡಿಸಿ ತಾವು ಹೆಚ್ಚಿನ ಮುತುವರ್ಜಿ ವಹಿಸಿ ಅವನ ಹಾವಳಿಯನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ರಾಜುಗೌಡರು ಹೇಳಿರತಕ್ಕಂಥ ವಿಷಯಗಳಲ್ಲಿ ಅನೇಕ ವಿಷಯಗಳು ವಾಸ್ತಾವಾಂಶದಿಂದ ಕೊಡಿವೆ. ಅಲ್ಲಿ ದಟ್ಟವಾಗಿರತಕ್ಕಂತಹ ಅರಣ್ಯ, ನೂರಾರು ಕಿಲೋಮೀಟರ್‌ಗಳವರೆಗೆ ಇದೆ. ಹಲವಾರು ವರ್ಷಗಳಿಂದ ಈ ವೀರಪ್ಪನ್ ವಿಚಾರ ಜನರ ಗಮನಕ್ಕೆ ಬಂದಿದೆ. ಒಂದು ಘಟನೆ ನಡೆದ ತಕ್ಷಣ ಅವನು ಸ್ಥಳ ಬದಲಾಯಿಸುವುದು ನಮ್ಮ ಗಮನಕ್ಕೆ ಬರುತ್ತಾ ಇದೆ. ಈ ವಿಚಾರದಲ್ಲಿ ನಾವು ಒಂದು ದೊಡ್ಡ ಸಭೆಯನ್ನು ನಡೆಸಿದ್ದೇವೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಇದು ಮಾನ್ಯ ಸದಸ್ಯರ ಗಮನದಲ್ಲಿದೆಯೆಂದು ನಾನು ಭಾವಿಸಿದ್ದೇನೆ. ಇಲ್ಲಿ ಅನೇಕ ಸಲ

ಚರ್ಚೆಯಾಗಿದೆ. ತಮಿಳುನಾಡು, ಕೇರಳ ಮತ್ತು ಕರ್ನಾಟಕ ಸೇರಿಸಿಕೊಂಡು ಒಂದು ಸಭೆಯನ್ನು, ನಡೆಸಿ ಅಲ್ಲಿ ಒಂದು ಟಾಸ್ಕ್‌ಫೋರ್ಸ್ ಅನ್ನುವಂಥಾದ್ದನ್ನು ಕೂಡ ಆಗಲೇ ಮಾಡಿದ್ದೇವೆ. ಐ.ಜಿ.ಪಿ. ಮಟ್ಟದ ಒಬ್ಬ ಅಧಿಕಾರಿ ನೇತೃತ್ವದಲ್ಲಿ ಮೂರು ರಾಜ್ಯಗಳ ಸಹಕಾರದ ಜೊತೆಗೆ ತಯಾರಿ ಕೂಡ ನಾವು ಮಾಡಿದ್ದೇವೆ. ಈ ಸಂದರ್ಭದಲ್ಲಿ ನಾನು ಸಹಕಾರ ಕೊಟ್ಟಿರತಕ್ಕಂಥಹ ತಮಿಳುನಾಡು ಮತ್ತು ಕೇರಳವನ್ನು ಅಭಿನಂದಿಸಬೇಕು. ಅವರೂ ಕೂಡ ತಮ್ಮ ಜನಗಳನ್ನು ಕಳಿಸಿ ತಮ್ಮ ಜೀವದ ಹಂಗನ್ನು ತೊರೆದು ಕೆಲಸ ಮಾಡಿರುವಂಥಾದ್ದನ್ನು ನಾವು ಮರೆಯುವಂತಿಲ್ಲ.

ರಾಜುಗೌಡರು ಹೇಳಿದ ಹಾಗೆ ದಟ್ಟವಾದ ಅರಣ್ಯ, ಒಂದು ಬಿದಿರು ಪೊದೆಯಲ್ಲಿ ಅಡಗಿಕೊಂಡರೆ ಅವನನ್ನು ಪತ್ತೆ ಹಚ್ಚುವುದಕ್ಕೆ ಆಗುವುದಿಲ್ಲ. ಅಷ್ಟೊಂದು ದಟ್ಟವಾಗಿರತಕ್ಕಂಥ ಪ್ರದೇಶ ಎಂಬ ವರದಿ ಅದು ನಮಗೂ ಇದೆ ಮಾನ್ಯ ಸದಸ್ಯರು ಕೂಡ ಹೇಳುತ್ತಿದ್ದಾರೆ. ಅಷ್ಟು ಇದ್ದರೂ ಕೂಡ ನಾವು ಈ ಕೆಲಸ ಮಾಡಲೇಬೇಕಾಗಿದೆ. ಹಠ ಚಲದಿಂದ ರಾಜ್ಯಸರ್ಕಾರ ಬೇರೆ ಸರ್ಕಾರಗಳ ಸಹಕಾರ ಪಡೆದು ಈ ಕೆಲಸದಲ್ಲಿ ನಿರತವಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾವು ಒಬ್ಬ ಒಳ್ಳೆಯ ಅಧಿಕಾರಿ ಶ್ರೀನಿವಾಸರವರನ್ನು ಕಳೆದು ಕೊಂಡೆವು. ಅವರು ಹೇಳಲಿಲ್ಲ ಎನ್ನುವ ಪ್ರಶ್ನೆಯಲ್ಲ, ಆದರೆ ಒಬ್ಬ ಅಧಿಕಾರಿಯನ್ನು ನಾವು ಕಳೆದುಕೊಂಡೆವು. ಆ ನಷ್ಟ ರಾಜ್ಯಕ್ಕೆ ಮತ್ತು ಜನಕ್ಕೆ ಆಗಿದೆಯೆಂದು ನಾನು ಭಾವಿಸಿದ್ದೇನೆ. ಶ್ರೀನಿವಾಸ ಕೊಲೆಯಾಗುವುದಕ್ಕಿಂತ ಮೊದಲು ಕೂಡ ಅನೇಕ ಎಸ್.ಐ.ಗಳು ತಮ್ಮ ಜೀವ ಕಳೆದುಕೊಂಡಿದ್ದಾರೆ. ಅದು ನಮ್ಮ ಗಮನದಲ್ಲಿದೆ. ಇದಕ್ಕೆ ಕಾರಣವೇನೆಂದರೆ ಅಲ್ಲಿ ಇರತಕ್ಕಂತಹ ಪ್ರದೇಶ ಪರಿಸ್ಥಿತಿ ಏನು ಇದೆ, ಅದು ಮುಖ್ಯವಾಗಿರತಕ್ಕಂಥ ಒಂದು ಕಾರಣ. ಇದಕ್ಕೆ ಮಾನ್ಯ ಸದಸ್ಯರು ಹೇಳಿದ ಹಾಗೆ ಇಲ್ಲಿ ಕರಿಕಲ್ಲು ಮಾಲೀಕರು ಅನೇಕ ವರ್ಷಗಳಿಂದ ಗುತ್ತಿಗೆ ಕೆಲಸಮಾಡುತ್ತಿದ್ದಾರೆ. ಅಲ್ಲಿಗೆ ಕಲ್ಲಿನ ಗಣಿಗಳಲ್ಲಿ ಕೆಲಸಮಾಡತಕ್ಕಂಥವರು ಹೋಗುತ್ತಾರೆ. ಬರುತ್ತಾರೆ. ಹೋರಾಟ ಮಾಡಬೇಕಾದರೆ ಯಾರು ಹೋರಾಟ ಮಾಡುತ್ತಾರೆ. ಅನ್ನುವಂಥಾದ್ದು, ಕರಿಕಲ್ಲು ಮಾಲೀಕರು ಅವರ ಜೊತೆ ಶಾಮೀಲು ಆದರೆ ಗೊತ್ತಾಗುವುದಿಲ್ಲ. ಇದಕ್ಕೆ ಕೆಲವು ವರದಿಗಳು ನನ್ನ ಹತ್ತಿರ ಇವೆ, ಅವೆಲ್ಲವನ್ನು ಹೇಳುವುದಕ್ಕೆ ಬರುವುದಿಲ್ಲ.

ನಿಮ್ಮ ಎದುರಿಗೆ ಮುಚ್ಚಿಡಬೇಕೆಂದು ಏನೂ ಇಲ್ಲ. ಆದರೆ ಕೆಲವು ವಿಚಾರಗಳು ಪತ್ರಿಕೆಗಳಿಗೆ ಹೋಗದೇ ಇರಲಿ ಎನ್ನತಕ್ಕ ಅಭಿಪ್ರಾಯ ಇದೆ. ಕಾರ್ಯಾಚರಣೆಯಲ್ಲಿ ತೊಡಗಿರತಕ್ಕ ಟಾಸ್ಕ್‌ಫೋರ್ಸ್‌ನ ಅಭಿಪ್ರಾಯ, ಮೂರು ರಾಜ್ಯಗಳ ಪೋಲೀಸ್ ಫೋರ್ಸ್‌ನ ಅಭಿಪ್ರಾಯ ಕೂಡ ಇದರಲ್ಲಿ ಅಡಗಿದೆ. ಈ ದೃಷ್ಟಿಯಿಂದ ಕರಿಕಲ್ಲು ಮಾಲೀಕರು ಅಥವಾ ಅಲ್ಲಿನ ಗಣಿಗಳು ಏನಿವೆ ಅವುಗಳ ಕಾರ್ಯಾಚರಣೆ ನಮಗೆ ಈ ಕೆಲಸಕ್ಕೆ ಕೆಲವುಸಾರಿ ಅಡ್ಡ ಬಂದಿರಬಹುದು ಎನ್ನತಕ್ಕ ಭಾವನೆ ನಮಗೆ ಆಗುತ್ತಿದೆ. ಸದ್ಯಕ್ಕೆ ಅವರ ಎಲ್ಲಾ ಲೈಸೆನ್ಸ್‌ಗಳನ್ನೂ ನಿಲ್ಲಿಸಿ, ಆ ಕಾರ್ಯಾಚರಣೆ ಸದ್ಯಕ್ಕೆ ಬೇಡ, ವೀರಪ್ಪನ್‌ನ ಗುಂಪಿನ ಉಪಟಳ ಮುಗಿಯುವವರೆಗೆ ಇದನ್ನು ನಿಲ್ಲಿಸಿ ಎಂದು ಹೇಳುತ್ತಿರುವುದರಲ್ಲಿ ಬಹಳ ಅರ್ಥ ಇದೆ ಎಂದು ನಾನಾದರೂ ಭಾವಿಸುತ್ತೇನೆ. ನಾವು ಟಾಸ್ಕ್ ಫೋರ್ಸ್‌ನ ಅಭಿಪ್ರಾಯವನ್ನು ಪಡೆದು ಮುಂದೆ ಏನು ಮಾಡಬೇಕೆಂದು ತಿಳಿಸುತ್ತೇವೆ. ಆದರೆ ತಾವು ಏನು ಅಭಿಪ್ರಾಯವನ್ನು ಹೇಳುತ್ತಿದ್ದೀರಿ ಇದರಲ್ಲಿ ಅರ್ಥ ಇದೆ. ನಾವು ಸಾಮಾನ್ಯವಾಗಿ ಕಾಡು ಪ್ರದೇಶದಿಂದ ಅಥವಾ ಕಾಡಿನ ಪಕ್ಕದ ಪ್ರದೇಶದಿಂದ ಬಂದಿರತಕ್ಕ ಜನರು ದಿನಬೆಳಗಾದರೆ

ನಾವು ಕಾಡಿಗೆ ಹೋಗತಕ್ಕದ್ದು, ಬರತಕ್ಕದ್ದು ಇದ್ದೇ ಇರುತ್ತದೆ. ಅಲ್ಲಿಗೆ ಹೋದಾಗ ಫಾರೆಸ್ಟ್ ಗಾರ್ಡ್ ಅಥವಾ ಫಾರೆಸ್ಟರ್ ಒಬ್ಬರು, ಇಬ್ಬರು ಇರತಕ್ಕ ಸಂದರ್ಭದಲ್ಲಿ ನಾನು ಸರ್ಕಾರೀ ಸೌಕರ ಎನ್ನತಕ್ಕ ದರ್ಪವನ್ನು ತೋರಿಸಿ ಕೆಲಸಮಾಡತಕ್ಕದ್ದು ಬಹಳಷ್ಟು ಕಷ್ಟಕರವಾದ ಕೆಲಸ. ನಾವು ಇವತ್ತು ಇಲ್ಲಿ ಮಾತನಾಡಬಹುದು. ಆದರೆ ಅಲ್ಲಿ ಮಾತನಾಡುವುದು ಬಹಳ ಕಷ್ಟ. ಏಕೆಂದರೆ ಅಲ್ಲಿರತಕ್ಕ ವಾಸ್ತವಾಂಶ, ಪರಿಸ್ಥಿತಿಯ ಹಿನ್ನೆಲೆ ಬೇರೆ ಇರುತ್ತದೆ. ದನಕಾಯುವುದಕ್ಕೆ ಹೋಗುವವರು ಸಹಕಾರ ಕೊಡತಕ್ಕ ರೀತಿಯಲ್ಲಿ ಈ ಕೆಲಸವನ್ನು ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಕೆಲವು ಸಾರಿ ಅವರಿಗೆ ಖರ್ಚಿಗೆ ಸ್ವಲ್ಪ ಹಣ ಕೊಟ್ಟರೆ ಸಾಕು ಅವರು ಏನು ಬೇಕಾದರೂ ಮಾಡುತ್ತಾರೆ. ಅವನಿಗೆ ಆಹಾರಧಾನ್ಯಗಳು ಹೇಗೆ ಹೋಗುತ್ತಿವೆ ಎಂದು ಕೆಲವರು ಎತ್ತಿರತಕ್ಕ ವಿಷಯದಲ್ಲಿ ಬಹಳಷ್ಟು ಉತ್ತರ ಅಡಗಿದೆ. ಈ ವಿಚಾರವನ್ನು ಒಳಗೊಂಡಂತೆ ಹಲವಾರು ಸುಳಿವು ನಮಗೆ ಸಿಕ್ಕಿವೆ. ನಮ್ಮ ಟಾಸ್ಕ್‌ಫೋರ್ಸ್‌ಗೆ ಅನೇಕ ಮಾಹಿತಿಗಳು ಸಿಕ್ಕಿವೆ. ಈಗ ಈ ವಿಚಾರದಲ್ಲಿ ಅವರನ್ನು ಯಾವಾಗ ಹಿಡಿಯುತ್ತೀರಿ ಎಂದು ನೀವು ಕೇಳುವ ಪ್ರಶ್ನೆಗೆ ನಾನು ಈಗಲೇ ಕಾಲಮಿತಿಯನ್ನು ಹೇಳತಕ್ಕದ್ದು ಅಷ್ಟು ಚೆನ್ನಾಗಿರುವುದಿಲ್ಲ

ಆದಾದಕೂಡಲೇ ಅದು ನಿಮ್ಮ ಗಮನಕ್ಕೆ ಬರುತ್ತದೆ. ಆದರೆ ವೀರಪ್ಪನ್‌ನನ್ನು ಹಿಡಿಯುವ ವಿಚಾರದಲ್ಲಿ ಶೀಘ್ರವಾಗಿ ಸಫಲವಾಗುವಂಥ ಕಾರ್ಯಾಚರಣೆಯನ್ನು ಮಾಡುತ್ತಾರೆಂಬ ನಂಬಿಕೆ ಇತ್ತೀಚಿನ ವರದಿಗಳ ಪ್ರಕಾರ ನಮ್ಮ ಸರ್ಕಾರಕ್ಕೆ ಬಂದಿದೆ. ಹೋಂ ಮಿನಿಸ್ಟರ್ ಆದಂಥ ಮಾನ್ಯ ಧರ್ಮಸಿಂಗ್‌ರವರು ಇದರ ಬಗ್ಗೆ ನಾಲ್ಕಾರುಸಾರಿ ಖಾಸಗಿಯಾಗಿ ಸಭೆಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಸೈನಿಕರನ್ನು ಕರೆಸಿ ಎಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ನಾವು ಇನ್ನೂ ಸ್ವಲ್ಪದಿನ ನೋಡೋಣ. ಈಗ ಐ.ಜಿ.ಪಿ.ಯವರ ನೇತೃತ್ವದಲ್ಲಿ 3 ರಾಜ್ಯಗಳ ಪೋಲಿಸ್ ಫೋರ್ಸ್‌ನ್ನು ಮಾಡಿದ್ದೇವೆ. ಇದರ ಕಾರ್ಯಾಚರಣೆ ಒಳ್ಳೆಯರೀತಿಯಲ್ಲಿ ಆದರೆ ಆಗಲಿ. ಒಂದುವೇಳೆ ಅನಿವಾರ್ಯ ಪರಿಸ್ಥಿತಿ ಬಂದಾಗ ಅದನ್ನು ವಿಚಾರ ಮಾಡೋಣ. ತಮ್ಮ ಸಲಹೆಯನ್ನು ನಾವು ತಳ್ಳಿಹಾಕುವುದಿಲ್ಲ. ಇನ್ನು ಈ ವಿಚಾರದಲ್ಲಿ ನನಗೆ ರಕ್ಷಣೆ ಕೊಡಬೇಕೆಂದು ಮಾನ್ಯ ರಾಜುಗೌಡರು ಕೇಳಿದ್ದಾರೆ. ಏಕೆಂದರೆ ಅದು ಅವರ ಪ್ರದೇಶ ಕೂಡ ಹೌದು. ಅವರು ಸದನದ ಸದಸ್ಯರಾಗಿದ್ದಾರೆ. ಇದು ಅವರೊಬ್ಬರ ಪ್ರಶ್ನೆ ಅಲ್ಲ. ಜೀವ ಎಂದರೆ ಎಲ್ಲರದ್ದೂ ಅಮೂಲ್ಯವಾದುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರ ಜೀವಕ್ಕೆ ತೊಂದರೆ ಇದೆ ಎಂದು ಸುದ್ದಿ ಬಂದಿದೆ. ಮಾನ್ಯ ವಾಟಾಳ್ ನಾಗರಾಜ್‌ರವರಿಗೂ ಹೆದರಿಸಿದ್ದಾರೆಂದು ತಿಳಿದುಬಂದಿದೆ.

ಶ್ರೀ ಎಸ್. ಬಂಗಾರಪ್ಪ : ಇರಬಹುದು. ಆದುದರಿಂದಲೇ ನಾನು ಹೇಳುತ್ತಿದ್ದೇನೆ. ಆದರೆ ಇದನ್ನು ಪ್ರಚಾರಕ್ಕಿಂತ ಹೆಚ್ಚಾಗಿ ನಮಗೆ ಖಾಸಗಿಯಾಗಿ ತಿಳಿಸಿದರೆ ನಾವು ಸೂಕ್ತ ವ್ಯವಸ್ಥೆ ಮಾಡುತ್ತೇವೆ. ರಕ್ಷಣೆ ಕೊಡತಕ್ಕ ವಿಚಾರವನ್ನು ಮಾನ್ಯ ಸದಸ್ಯರಾದ ರಾಜುಗೌಡರು ತಿಳಿಸಿದ್ದಾರೆ. ಅವರಿಗೆ ಸಂಪೂರ್ಣ ರಕ್ಷಣೆಯನ್ನು ಕೊಡತಕ್ಕ ಕೆಲಸವನ್ನು ನಾವು ಮಾಡುತ್ತೇವೆ. ಯಾವರೀತಿಯ ರಕ್ಷಣೆ ಕೊಡಬೇಕೆಂದು ಅವರ ಜೊತೆ ಮಾತನಾಡಿದ ನಂತರವೇ ಕೊಡುತ್ತೇವೆ. ಏಕೆಂದರೆ ಆ ಪ್ರದೇಶದ ಪರಿಸ್ಥಿತಿಯನ್ನು ನೋಡಿಕೊಂಡು, ಕಾರ್ಯಾಚರಣೆಯನ್ನು ನಾವು ಹಾಕಿಕೊಳ್ಳುತ್ತೇವೆ. ತಮಗೆ ತಿಳಿದಿರುವಂತೆ ವೀರಪ್ಪನ್ ಕಡೆಯ ಒಬ್ಬ ನಮ್ಮ ಕೈಗೆ ಇತ್ತೀಚೆಗೆ

ಸಿಕ್ಕಿಬಿದ್ದಾಗ ಅವನ ಬಗ್ಗೆ ನಮ್ಮವರು ನಿಗಾ ಇಟ್ಟಿದ್ದರು. ಅವನ ಹೆಸರು ಗುರುನಾಥನ್ ಎಂದು. ಅವನು ವೀರಪ್ಪನ್ ಗುಂಪಿನ ಬಹಳ ಪ್ರಮುಖವಾದ ವ್ಯಕ್ತಿ ಎಂದು ನಮ್ಮ ಟಾಸ್ಕ್ ಫೋರ್ಸ್‌ಗೆ ವರದಿ ಬಂದನಂತರ ಈ ಕೆಲಸವನ್ನು ಮಾಡಿದ್ದಾರೆ. ಆದರೆ ಅವನು ತಪ್ಪಿಸಿಕೊಂಡು ಹೋಗುವಂಥ ಸಂದರ್ಭದಲ್ಲಿ ಅನಿವಾರ್ಯವಾಗಿ ಅವನಮೇಲೆ ಗುಂಡು ಹಾರಿಸಿ ಜೀವ ತೆಗೆಯಬೇಕಾಗಿ ಬಂತು. ನಮ್ಮ 3 ರಾಜ್ಯಗಳ ಟಾಸ್ಕ್ ಫೋರ್ಸ್ ಏನಿತ್ತು ಅದು ತನ್ನ ಕಾರ್ಯಾಚರಣೆಯನ್ನು ಮಾಡಲೇಬೇಕಾಯಿತು.

ಅಂದರೆ ಈಗಾಗಲೇ ಅದರ ಬಗ್ಗೆ ಸಂಪೂರ್ಣವಾದ ಸುಳಿವು, ಮಾಹಿತಿ ನಮಗೆ ಬಂದಿದೆ. ಅದರಲ್ಲಿ ನಮ್ಮವರು ನಿರತರಾಗಿದ್ದಾರೆ.

ಮಾನ್ಯ ಸಭಾಧ್ಯಕ್ಷರೆ, ಇನ್ನು ಒಂದೇ ಒಂದು ಮಾತನ್ನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ವಿವರವಾಗಿರತಕ್ಕಂಥ ವಿಚಾರವನ್ನು ಈ ಸದನದಲ್ಲಿ ಮಾಡಿದಷ್ಟೂ ಒಳ್ಳೆಯದಲ್ಲ ಎನ್ನತಕ್ಕ ಅಭಿಪ್ರಾಯವನ್ನು ಈ ಟಾಸ್ಕ್ ಫೋರ್ಸ್ ವ್ಯಕ್ತ ಮಾಡಿದೆ. ಅವರು ತೀವ್ರವಾಗಿ ಕಾರ್ಯಾಚಾರಣೆಯಲ್ಲಿದ್ದಾರೆ. ಆದರೆ ಇದರ ಬಗ್ಗೆ ಚರ್ಚೆಯನ್ನು ಮೊಟಕು ಮಾಡಬೇಕೆಂದು ನಾನು ಹೇಳುತ್ತಿಲ್ಲ. ಇದು ನಾಳೆ ಪತ್ರಿಕೆಗಳಲ್ಲಿ ಬರಬಾರದೆಂಬ ದೃಷ್ಟಿಯಿಂದ ಅವರೇ ಹೇಳಿದ್ದಾರೆ. ಇಷ್ಟು ಮಾತನ್ನು ಹೇಳಿ ಇನ್ನೂ ಕೆಲವು ವಿಚಾರಗಳೇನಾದರೂ ಪ್ರಸ್ತಾಪ ಮಾಡುವುದಿದ್ದರೆ ಅದನ್ನು ಖಾಸಿಗಯಾಗಿ ಮಾತನಾಡೋಣ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ನಮ್ಮ ಬಾಯಿ ಮುಚ್ಚಿದೆ. ಕಾರಣ ಏನೆಂದರೆ ಗಮನಸೆಳೆಯುವ ಸೂಚನೆಯಲ್ಲಿ ನಾವು ಏನನ್ನೂ ಮಾತನಾಡುವಂತಿಲ್ಲ, ಆದರೆ ಇದನ್ನು ನಾವು ಸಮಗ್ರವಾಗಿ ಚರ್ಚೆಮಾಡಬೇಕಾಗುತ್ತದೆ.

ಅಧ್ಯಕ್ಷರು : ಈಗ ಸಭೆ ಮುಂದುವರಿದು ಮತ್ತೆ ಮಧ್ಯಾಹ್ನ 2.30 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸಭೆಯು ಮತ್ತೆ 2.30 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಮಧ್ಯಾಹ್ನ 2.45 ನಿಮಿಷಕ್ಕೆ ಸಮಾವೇಶಗೊಂಡಿತು ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನು ಅಲಂಕರಿಸಿದರು)

ನಿಯಮ 334ರ ಮೇರೆಗೆ

(1) ದಕ್ಷಿಣ ಕನ್ನಡ ಜಿಲ್ಲೆಯ ಖಾಸಗೀ ಪ್ರೌಢಶಾಲೆಗಳಿಗೆ ಮಾನ್ಯತೆ ನೀಡುವುದು.

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಉಪಾಧ್ಯಕ್ಷಿಣಿಯವರೇ, ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ತನ್ನ ನಿರ್ಣಯದ ಸಂಖ್ಯೆ 7(4) ದಿನಾಂಕ 4.6.88ರಲ್ಲಿ ವಿದ್ಯಾ ಸಮಿತಿಯ ದಿನಾಂಕ 23.5.88ರ ಶಿಫಾರಸ್ಸಿನಂತೆ ದಕ್ಷಿಣ ಕನ್ನಡ ಜಿಲ್ಲೆಯ ಎಂಟು ಸ್ಥಳಗಳಲ್ಲಿ 1988-89ನೇ ಸಾಲಿನಲ್ಲಿ ಹೊಸ ಖಾಸಗಿ ಪ್ರೌಢಶಾಲೆಗಳನ್ನು ತೆರೆಯಲು ಅನುಮತಿ ನೀಡಿತ್ತು. ಅದೇ ರೀತಿ ಅದೇ ವರ್ಷ ಜಿಲ್ಲಾ ಪರಿಷತ್ತು ಕೇಂದ್ರ ಸರ್ಕಾರಿ ಪ್ರೌಢಶಾಲೆಗಳನ್ನು ತೆರೆಯಲು ಕೂಡ ಅನುಮತಿ ನೀಡಿತ್ತು. ಆದರೆ, ಸರ್ಕಾರಿ ಪ್ರೌಢಶಾಲೆಗಳಿಗೆ ಕರ್ನಾಟಕ ಸರ್ಕಾರ ಮಂಜೂರಾತಿ ಮತ್ತು ಮಾನ್ಯತೆ ನೀಡಿದೆ. ಖಾಸಗಿ ಪ್ರೌಢಶಾಲೆಯು ಎಲ್ಲಾ ಪ್ರೌಢಶಾಲೆಗಳ ರೀತಿಯಲ್ಲಿ ಕಾರ್ಯ ಮಾಡುತ್ತಿದ್ದರೂ ಸರ್ಕಾರದಿಂದ ಮಂಜೂರಾತಿ